# ಆನ್‌ಲೈನ್ ಕ್ಲಾಸ್‌ರೂಮ್!

ಕೊರೊನಾ ವಿಧಿಸಿದ ಈ ದಿಗ್ಬಂಧನದಲ್ಲಿ ಬೇಸರ ಕಳೆಯಲು ಮಗನೊಂದಿಗೆ ಚೌಕಾಬಾರಾ ಆಡುತ್ತಾ ಕುಳಿತಿದ್ದ ಕ್ಷಣವದು. ಅವನು ಪಾಠ ಹೇಳಿಸಿಕೊಳ್ಳುತ್ತಿದ್ದ ವಿದ್ಯಾಸಂಸ್ಥೆಯಿಂದ ಇದ್ದಕ್ಕಿದ್ದಂತೆ ಕರೆ ಬಂತು. 'ಇನ್ನೆರಡು ದಿನಗಳಲ್ಲಿ ಆನ್‌ಲೈನ್ ಕೋರ್ಸ್ ಶುರುವಾಗಲಿದೆ. ಆ್ಯಪ್ ಮೂಲಕ ಬೋಧನೆಯನ್ನು ನೇರವಾಗಿ ನಿಮ್ಮ ಮನೆ ಬಾಗಿಲಿಗೆ ತರುವ (ಲೈವ್ ಸ್ಟ್ರೀಮ್) ಸೌಲಭ್ಯ ಇದಾಗಿದ್ದು, ಮಕ್ಕಳಿಗೆ ತರಗತಿಯಲ್ಲೇ ಕುಳಿತು ಪಾಠ ಕೇಳಿದ ಅನುಭವ ಸಿಗಲಿದೆ. ಅಲ್ಲದೆ, ಪಾಠದಲ್ಲಿ ಎದುರಾದ ಗೊಂದಲಗಳನ್ನು ಶಿಕ್ಷಕರಿಂದ ಆ ಕ್ಷಣದಲ್ಲೇ ಬಗೆಹರಿಸಿಕೊಳ್ಳಲು ಸಾಧ್ಯವಿದೆ' ಎಂದು ಪುಸಲಾಯಿಸಿದರು ಕರೆ ಮಾಡಿದ್ದ ಸಂಸ್ಥೆಯ ಆ ಪ್ರತಿನಿಧಿ.

ಹೊತ್ತು ಕಳೆಯುವಂತೆ ಮಾಡಲು, ಅದರಲ್ಲೂ ಸ್ವಲ್ಪ ಸಮಯ ಪುಸ್ತಕ ಹಿಡಿಸಲು, ಹೊಸ ಹಾದಿಯೊಂದು ಸಿಕ್ಕಿತು ಅಂದುಕೊಂಡು ಆ ವಿದ್ಯಾಸಂಸ್ಥೆಯ ಆಹ್ವಾನವನ್ನು ತಕ್ಷಣ ಸ್ವೀಕರಿಸಿದ್ದಾಯಿತು. 'ಲೈವ್ ಸ್ಟ್ರೀಮ್‌ಗಾಗಿ ಈ ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳಿ' ಎಂದು ಜೂಮ್ ಆ್ಯಪ್‌ನ ಲಿಂಕ್, ಅದರ ಬೆನ್ನಹಿಂದೆಯೇ ಅವರ ಡಿಜಿಟಲ್ ಕ್ಲಾಸ್‌ರೂಮ್‌ಗೆ ಪ್ರವೇಶ ಪಡೆಯಲು 'ಗುರುತಿನ ಚೀಟಿ' ಎನಿಸಿದ ಪಾಸ್‌ವರ್ಡ್ ಎರಡೂ ತಟ್ಟನೆ ಬಂದವು. ಪಾವತಿಸಬೇಕಾದ ಫೀ ವಿವರದ ಸಂದೇಶ ಕೂಡ ಸದ್ದಿಲ್ಲದೆ ಬಂದು ಕಣ್ಣು ಮಿಟುಕಿಸಿತ್ತು. ಎರಡು ದಿನಗಳ ಬಳಿಕ ಸ್ಮಾರ್ಟ್‌ಫೋನ್‌ನಲ್ಲಿ ನಡೆದ ಲೈವ್ ಸ್ಟ್ರೀಮ್ ತರಗತಿಯನ್ನು ಬೆರಗುಗಣ್ಣಿನಿಂದ ನೋಡಿದ್ದೂ ಆಯಿತು. ಹತ್ತಾರು ಕಿಲೋಮೀಟರ್ ದೂರ ಹೋಗಿ ಹೇಳಿಸಿಕೊಂಡು ಬರುತ್ತಿದ್ದ ಪಾಠವನ್ನು ಸ್ಮಾರ್ಟ್‌ಫೋನ್ ಅಂಗೈವರೆಗೂ ಕರೆತಂದಿತ್ತು.

ತಂತ್ರಜ್ಞಾನ ಆಧಾರಿತ ಶಿಕ್ಷಣ ವ್ಯವಸ್ಥೆಯು 'ಕೊರೊನಾ ಯುಗ'ದಲ್ಲಿ ದಿಢೀರ್ ಎಂದು ಉದ್ಭವವಾದದ್ದೇನೂ ಅಲ್ಲ. ಆನ್‌ಲೈನ್ ಪಠ್ಯಗಳು, ಪೂರಕ ಸಂಪನ್ಮೂಲಗಳು, ಬೋಧನೆಯ ವಿಡಿಯೊಗಳು, ಲೈವ್ ಡೆಮೊಗಳು... ಹೀಗೆ ಥರಾವರಿ ಆನ್‌ಲೈನ್ ಕಂಟೆಂಟ್‌ಗಳು, ಶಿಕ್ಷಣದ ಕಾಲಕಾಲದ ಸವಾಲುಗಳಿಗೆ ಉತ್ತರ ರೂಪವಾಗಿ ಒದಗುತ್ತಲೇ ಬಂದಿವೆ. ಆ್ಯಪ್ ಆಧಾರಿತ ಆನ್‌ಲೈನ್ ಶಿಕ್ಷಣ ಶುರುವಾಗಿ ವರ್ಷಗಳೇ ಕಳೆದಿವೆ. ಅನೇಕ ವಿಶ್ವವಿದ್ಯಾಲಯಗಳಲ್ಲಿ ಬೋಧಕರ ಕೊರತೆಯನ್ನು ನೀಗಿಸಲು ಆನ್‌ಲೈನ್ ಪಾಠಗಳಿಗೆ ಮೊರೆ ಹೋಗುವುದೂ ಉಂಟು. ಡಿಜಿಟಲ್ ಕ್ಲಾಸ್‌ರೂಮ್ ಕೂಡ ಭಾರತೀಯ ವಿದ್ಯಾರ್ಥಿಗಳಿಗೆ ಹೊಸದೇನಲ್ಲ. ಆದರೆ, ಲೈವ್ ತರಗತಿಗಳು ಹೀಗೆ ನೇರವಾಗಿ, ದೊಡ್ಡ ಪ್ರಮಾಣದಲ್ಲಿ ಮನೆ–ಮನೆಗೆ ತಲುಪುತ್ತಿರುವುದು ಮಾತ್ರ ಇದೇ ಮೊದಲು.

## ಅಂಗೈಯೊಳಗೆ ಶಾಲೆ

ಒಂದಾನೊಂದು ಕಾಲದಲ್ಲಿ ಶಿಕ್ಷಣ ಪಡೆಯಬೇಕೆಂಬ ಹಂಬಲವಿದ್ದ ಶಿಷ್ಯಂದಿರೆಲ್ಲ ಗುರುವನ್ನು ಹುಡುಕಿಕೊಂಡು ದೂರ, ಬಹುದೂರ ಹೋಗಬೇಕಿತ್ತು. ಗುರುಕುಲ ಪದ್ಧತಿಯ ಆ ಶಿಕ್ಷಣದಲ್ಲಿ, ಶಿಷ್ಯನಾದವನು ಗುರುವಿನ ಬಳಿಯೇ ಇದ್ದು, ಗುರುವಿನ ಸೇವೆ ಮಾಡುತ್ತಲೇ ಕಲಿಕೆಯಲ್ಲಿ ತೊಡಗಬೇಕಿತ್ತು. ಬಳಿಕ ಗುರು–ಶಿಷ್ಯರನ್ನು ಒಂದೇ ಕಡೆ ಸೇರಿಸುವಂತಹ ಶಾಲಾ ವ್ಯವಸ್ಥೆ ರೂಪುಗೊಂಡಿತು. ಯುರೋಪಿನ ಈ ಶೈಕ್ಷಣಿಕ ಮಾದರಿ ಈಗ ಜಗತ್ತಿನ ತುಂಬಾ ಮಾನ್ಯ. ಕೊರೊನಾದ ಈ ಕಾಲಘಟ್ಟವು ಶಿಕ್ಷಣ ಕ್ಷೇತ್ರದಲ್ಲಿ ಮತ್ತೆ ಹೊಸನೀರು ಹರಿಸುತ್ತಿದೆ. ಹೊಸಹಾದಿಯೂ ತೆರೆದುಕೊಳ್ಳುತ್ತಿದೆ. ಅದು, ಸ್ವತಃ ಗುರು (ಶಿಕ್ಷಕ), ಆನ್‌ಲೈನ್ ಮೂಲಕ ಶಿಷ್ಯಂದಿರ ಮನೆಯಲ್ಲೇ ಕಾಣಿಸಿಕೊಂಡು ಪಾಠಮಾಡುವ ಹಾದಿ! ಈ ಹಿಂದೆ ಮಕ್ಕಳು ಸಮವಸ್ತ್ರ ಧರಿಸಿ, ಮನೆಯ ಮುಂದೆ ವ್ಯಾನ್‌ಗಾಗಿ ಕಾಯುತ್ತಾ ನಿಲ್ಲುತ್ತಿದ್ದರು. ಇನ್ನುಮುಂದೆ ಮೊಬೈಲ್‌ನಲ್ಲಿಯೇ ತೆರೆಯಲಿರುವ ಶಾಲೆಗಾಗಿ ಕಾಯುತ್ತಾ ಕೂರಬೇಕಾದ ದಿನಗಳು ಬರಲಿವೆಯೇನೋ. ಕೆಲವು ವಾರಗಳ ಬಳಿಕ



ಮಕ್ಕಳಿಗೆ ಆನ್‌ಲೈನ್ ಬಳಸುವುದು ಹೇಗೆ ಎನ್ನುವುದರ ಮೊದಲ ಪಾಠ ಮನೆಯಿಂದಲೇ, ಅಮ್ಮನಿಂದಲೇ ಶುರುವಾಗಬೇಕು. ಆಗಷ್ಟೇ ಮಕ್ಕಳಿಗೆ ಅಂತರ್ಜಾಲದಲ್ಲಿ ಯಾವುದು ಬೇಡ, ಯಾವುದು ಒಳಿತು ಎನ್ನುವುದರ ಅರಿವುಂಟಾಗುತ್ತದೆ.